**CW : 12**

PW :8

# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1100/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಅಸ್ವಾನ ಬಿ ಎಸ್ |
| ತಂದೆಯ ಹೆಸರು | : | ಶ್ರೀ ಬಿ ಎ ಶಮ್ ಶುದ್ದೀನ್ |
| ಪ್ರಾಯ | : | 43 ವರ್ಷ |
| ಉದ್ಯೋಗ | | ಹಿರಿಯ ಮೊ. ವಾಹನ ನೀಡಿಕ್ಷಕರು, ಪ್ರಾ.ಸಾ.ಇ ಪುತ್ತೂರು |
| ವಾಸಸ್ಥಳ | : | ಪುತ್ತೂರು |

ದಿನಾಂಕಃ **30.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಜುಲೈ 2023 ರಿಂದ ಪ್ರಸ್ತುತವು ಸಹ ಪುತ್ತೂರು ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಹಿರಿಯ ಮೊ. ವಾಹನ ನಿರೀಕ್ಷಕ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.26-09-2023 ರಂದು ಪುತ್ತೂರು ಗ್ರಾಮಾಂತರ ಪೋ ಠಾಣೆಯ ಉಪ ನಿರೀಕ್ಷಕರ ಮನವಿಯ ಮೇರೆಗೆ ಅದೇ ದಿನ ಮ.2 ಗಂಟೆಗೆ ಪುತ್ತೂರು ಗ್ರಾಮಾತಂರ ಠಾಣಾ ಆವರಣದಲ್ಲಿ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಲ್ಲಿಸಲಾದ ವಾಹನ ಸಂ.ಕೆಎ-19-ಎಂಜಿ-5294 ನೊಂದಣಿ ಸಂಖ್ಯೆಯ ಮಾರುತಿ ಇಕೋ ಕಾರನ್ನು ಪರಿಶೀಲಿಸಿ ವರದಿಯನ್ನು ನೀಡಿರುತ್ತಾರೆ.

ನಾನು ವಾಹನವನ್ನು ಪರೀಕ್ಷಿಸಿದಾಗ ವಾಹನಕ್ಕೆ ಮುಂದಿನ ಎಡಬದಿಯ ಹೆಡ್ ಲೈಟ್ ಹಾಗೂ ಇಂಡಿಕೆಟರ್ ಗ್ಲಾಸ್ ಒಡೆದಿತ್ತು, ಎಡಬದಿಯ ಹೆಡ್ ಲೈಟ್ ಮೇಲಿನ ಬೋನೆಟ್ ಹಾಗೂ ಮುಂದಿನ ಬಂಪರ್ ನ ಎಡಬದಿಯಲ್ಲಿ ಜಖಂ ಆಗಿತ್ತು. ನಾನು ವಾಹನವನ್ನು ಚಲಾಯಿಸಿ ನೋಡಿದಾಗ ಅದರ ಅಡೆತಡೆಗಳು ಸುಸ್ಥಿತಿಯಲ್ಲಿದ್ದವು. ನನ್ನ ಅಭಿಪ್ರಾಯದಂತೆ ಅಪಘಾತವು ನಾನು ಪರೀಕ್ಷಿಸಿದ ವಾಹನದ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ನಾನು ಪೋಲಿಸರಿಗೆ ನೀಡಿದ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವರದಿಯನ್ನು ಹಾಗೂ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರ ಐಎಂವಿ ವರದಿಯನ್ನು ನಿಪಿ7 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ7ಎ ಎಂದು ಗುರುತಿಸಲಾಯಿತು.

**CW : 12**

PW :8

ನಾನು ಪರೀಕ್ಷಿಸಿದ ವಾಹನವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಪಿ 1 ಛಾಯಾಚಿತ್ರದಲ್ಲಿ ಕಾಣುವ ಕಾರನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃಆರೋಪಿ ಪರ ಎಂ ಎಂ ವಕೀಲರಿಂದಃ

ವಾಹನದ ಎಡಬದಿಗೆ ಡಿಕ್ಕಿಪಡಿಸಿದರೆ ವಾಹನ ಅದರ ಎಡಬದಿಗೆ ಬೀಳುವುದಿಲ್ಲ. ಪೋಲಿಸರ ಮನವಿ ಮೇರೆಗ ನಾನು ಸುಳ್ಳು ಐಎಂವಿ ವರದಿಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನಿಪಿ1ರಲ್ಲಿ ಕಾಣುವ ವಾಹನವನ್ನು ಪುತ್ತೂರು ಗ್ರಾ. ಪೊ. ಠಾಣಾ ಆವರಣದಲ್ಲಿ ಪರೀಕ್ಷಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.